## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮುತ್ಕೂರು ಗ್ರಾಮ ಪಂಚಾಯತಿಯ ಕೇಂದ್ರ ಸ್ಥಾನವನ್ನು ಮುತ್ಕೂರು ಗ್ರಾಮದಿಂದ ರಾಮೇಶ್ವರ ಬಂಡಿ ಗ್ರಾಮದ ತೆಲಗೋಳಿ ಕ್ರಾಸ್‌ಗೆ ಬದಲಾವಣೆ ಮಾಡಿ, ಮುತ್ಕೂರು ಗ್ರಾಮ ಪಂಚಾಯತಿ ಹೆಸರನ್ನು ಮುತ್ಕೂರು-ಕಿತ್ನೂರು ಗ್ರಾಮ ಪಂಚಾಯತಿ ಎಂದು ಬದಲಾವಣೆ ಮಾಡುವ ಕುರಿತು.

ಓದಲಾಗಿದೆ:
1. ಶ್ರೀ ಸಂತೋಷ್ ಎಸ್. ಲಾಡ್, ಮಾಜಿ ಸಚಿವರು, ಕರ್ನಾಟಕ ಸರ್ಕಾರ ಇವರ ಪತ್ರ ಸಂಖ್ಯೆ ಕಾ.ಸ/679/2016, ದಿನಾಂಕ 04.08.2016.
2. ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಇವರ ಪತ್ರ ಸಂಖ್ಯೆ ಕಂ:ಚುನಾವಣೆ:6&:2015-16, ದಿನಾಂಕ: 14.12.2017.

ಪ್ರಸ್ತಾವನೆ :

ಮೇಲೆ ಓದಲಾದ (1) ರಲ್ಲಿ ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮುತ್ಕೂರು ಗ್ರಾಮ ಪಂಚಾಯತಿಯ ಕೇಂದ್ರ ಸ್ಥಾನವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಮುತ್ಕೂರು ಗ್ರಾಮದಿಂದ ಕಿತ್ನೂರು ಗ್ರಾಮಕ್ಕೆ ಬದಲಾವಣೆ ಮಾಡುವ ಕುರಿತು ಶ್ರೀ ಸಂತೋಷ್ ಎಸ್. ಲಾಡ್, ಮಾಜಿ ಸಚಿವರು, ಕರ್ನಾಟಕ ಸರ್ಕಾರ.ರವರು ಕೋರಿದ್ದರು.

ಮೇಲೆ ಓದಲಾದ (2) ರಲ್ಲಿ ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಇವರು ಮುತ್ಕೂರು ಬದಲು ಕಿತ್ನೂರು ಗ್ರಾಮವನ್ನು ಕೇಂದ್ರಸ್ಥಾನವನ್ನಾಗಿ ರಚನೆ ಮಾಡುವ ಕುರಿತು ಸ್ಥಳೀಯವಾಗಿ ವಿಚಾರಣೆ ನಡೆಸಿದ ಆಧಾರದ ಮೇಲೆ ಮುತ್ಕೂರು ಮತ್ತು ಕಿತ್ನೂರು ನಿವಾಸಿಗಳ ನಡುವಿನ ವಿವಾದದ ಕಾರಣ ಗ್ರಾಮಗಳ ರಚನೆಯ ಬಗ್ಗೆ ಹಳ್ಳಿಯ ಎರಡು ಗ್ರಾಮಗಳು ಸಿದ್ಧವಾಗಿರುವುದಿಲ್ಲ. ಆಡಳಿತಾತ್ಮಕ ಅನುಕೂಲತೆ ಸಾರ್ವಜನಿಕ ಉಪಯೋಗಕ್ಕೆ ಮತ್ತು ಕೇಂದ್ರಿಯ ದೃಷ್ಟಿಕೋನಗಳನ್ನು ಗಮನದಲಿಟ್ಟುಕೊಂಡು ಕೇಂದ್ರ ಸ್ಥಾನವನ್ನು ರಾಮೇಶ್ವರಬಂಡಿ ಗ್ರಾಮದ ತೆಲಗೋಳಿ ಕ್ರಾಸ್‌ಗೆ ಬದಲಾಯಿಸಬಹುದಾಗಿದೆ ಮತ್ತು ಇದು ಗ್ರಾಮಗಳ ಮಧ್ಯೆ ಇರುತ್ತದೆ ಹಾಗೂ ಎಲ್ಲಾ ಹಳ್ಳಿಗಳ ಸಂಚಾರಕ್ಕೆ ಅನುಕೂಲವಾಗುತ್ತದೆಂದು ತಿಳಿಸಿದ್ದಾರೆ.

ಆಡಳಿತಾತ್ಮಕ ಅನುಕೂಲತೆ ಹಾಗೂ ಸಾರ್ವಜನಿಕ ಅನುಕೂಲಕ್ಕಾಗಿ ಮುತ್ಕೂರು ಗ್ರಾಮ ಪಂಚಾಯತಿಯ ಕೇಂದ್ರಸ್ಥಾನವನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ನಿಯಮ 4(2)(ಸಿ) ರನ್ವಯ ರಾಮೇಶ್ವರಬಂಡಿ ಕಂದಾಯ ಗ್ರಾಮದ ತೆಲಗೋಳಿ ಕ್ರಾಸ್ ಅನ್ನು ಕೇಂದ್ರಸ್ಥಾನವನ್ನಾಗಿ ಮಾಡಲು ಹಾಗೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ನಿಯಮ 4(2)(ಡಿ) ಪ್ರಕಾರ ಮುತ್ಕೂರು ಗ್ರಾಮ ಪಂಚಾಯತಿ ಎಂದು ಹೆಸರು ಇರುವುದನ್ನು ಮುತ್ಕೂರು ಕಿತ್ನೂರು ಗ್ರಾಮ ಪಂಚಾಯತಿಯೆಂದು ಹೆಸರು ಬದಲಾಯಿಸುವಂತೆ ಸರ್ಕಾರಕ್ಕೆ ಜಿಲ್ಲಾಧಿಕಾರಿಗಳು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು ಸಾರ್ವಜನಿಕರು ಗ್ರಾಮ ಪಂಚಾಯತಿಯಲ್ಲಿ ತಮ್ಮ ಕೆಲಸ ಕಾರ್ಯಗಳಿಗೆ ಸಂಚರಿಸಲು ಹತ್ತಿರವಿರುವುದರಿಂದ ಮತ್ತು ಆಡಳಿತಾತ್ಮಕ ಕಾರಣಗಳಿಂದಾಗಿ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮುತ್ಕೂರು ಗ್ರಾಮ ಪಂಚಾಯತಿಯ ಕೇಂದ್ರ ಸ್ಥಾನವನ್ನು ಮುತ್ಕೂರು ಗ್ರಾಮದಿಂದ ರಾಮೇಶ್ವರ ಬಂಡಿ ಗ್ರಾಮದ ತೆಲಗೋಳಿ ಕ್ರಾಸ್‌ಗೆ ಬದಲಾವಣೆ ಮಾಡಬೇಕಾಗಿದೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 4, ಉಪಪ್ರಕರಣ (2), ಖಂಡ (ಸಿ) ರನ್ವಯ, ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೆ ಮತ್ತು ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಜಿಲ್ಲಾಧಿಕಾರಿಗಳು ಸಂಬಂಧಪಟ್ಟ ಗ್ರಾಮ ಪಂಚಾಯತಿಯ ವಿನಂತಿ ಮೇರೆಗೆ ಅಥವಾ ಅನ್ಯಥಾ ಮತ್ತು ಅಧಿಸೂಚನೆಯ ಮೂಲಕ ಪ್ರಸ್ತಾಪವನ್ನು ಮೊದಲೇ ಪ್ರಕಟಿಸಿದ ತರುವಾಯ, ಯಾವುದೇ ಸಮಯದಲ್ಲಿ, ಯಾವುದೇ ಪಂಚಾಯತಿ ಪ್ರದೇಶದ ಕೇಂದ್ರ ಕಾರ್ಯಸ್ಥಾನವನ್ನು ಬದಲಾಯಿಸಲು ಹಾಗೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 4, ಉಪಪ್ರಕರಣ (2), ಖಂಡ (ಡಿ) ರನ್ವಯ, ಯಾವುದೇ ಪಂಚಾಯತಿ ಪ್ರದೇಶದ ಹೆಸರನ್ನು ಬದಲಾಯಿಸಲು ಜಿಲ್ಲಾಧಿಕಾರಿಗಳು ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ. ಆದ್ದರಿಂದ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 4, ಉಪಪ್ರಕರಣ (2),

ಖಂಡ (ಸಿ)ಮತ್ತು (ಡಿ) ರನ್ವಯ ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮುತ್ಕೂರು ಗ್ರಾಮ ಪಂಚಾಯತಿಯ ಕೇಂದ್ರ ಸ್ಥಾನವನ್ನು ಮುತ್ಕೂರು ಗ್ರಾಮದಿಂದ ರಾಮೇಶ್ವರ ಬಂಡಿ ಗ್ರಾಮದ ತೆಲಗೋಳಿ ಕ್ರಾಸ್‌ಗೆ ಬದಲಾವಣೆ ಮಾಡಿ, ಮುತ್ಕೂರು ಗ್ರಾಮ ಪಂಚಾಯತಿ ಹೆಸರನ್ನು ಮುತ್ಕೂರು-ಕಿತ್ನೂರು ಗ್ರಾಮ ಪಂಚಾಯತಿ ಎಂದು ಬದಲಾವಣೆ ಮಾಡಲು ಸರ್ಕಾರ ನಿರ್ಧರಿಸಿದೆ. ಅದರಂತೆ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 159 ಗ್ರಾಪಂಅ 2017,**
**ಬೆಂಗಳೂರು, ದಿನಾಂಕ: 16.11.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 4, ಉಪಪ್ರಕರಣ (2), ಖಂಡ (ಸಿ)ಮತ್ತು (ಡಿ) ರನ್ವಯ ಬಳ್ಳಾರಿ ಜಿಲ್ಲೆ, ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮುತ್ಕೂರು ಗ್ರಾಮ ಪಂಚಾಯತಿಯ ಕೇಂದ್ರ ಸ್ಥಾನವನ್ನು ಮುತ್ಕೂರು ಗ್ರಾಮದಿಂದ ರಾಮೇಶ್ವರ ಬಂಡಿ ಗ್ರಾಮದ ತೆಲಗೋಳಿ ಕ್ರಾಸ್‌ಗೆ ಬದಲಾವಣೆ ಮಾಡಲು ಹಾಗೂ ಮುತ್ಕೂರು ಗ್ರಾಮ ಪಂಚಾಯತಿ ಹೆಸರನ್ನು ಮುತ್ಕೂರು-ಕಿತ್ನೂರು ಗ್ರಾಮ ಪಂಚಾಯತಿ ಎಂದು ಬದಲಾವಣೆ ಮಾಡಲು ಸರ್ಕಾರ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

16/11

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ ವೃತ್ತ, ಬೆಂಗಳೂರು.
2. ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ.
4. ಕಾರ್ಯದರ್ಶಿಗಳು, ರಾಜ್ಯ ಚುನಾವಣಾ ಆಯೋಗ, ಬೆಂಗಳೂರು.
5. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ, ಹಗರಿಬೊಮ್ಮನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
6. ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ., ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ.
7. ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮುತ್ಕೂರು ಗ್ರಾಮ ಪಂಚಾಯತಿ, ಹಗರಬೊಮ್ಮನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಗಳು (ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸಂಪಾದಕರು, ಕರ್ನಾಟಕ ವಿಕಾಸ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲು.
5. ಗಣಕ ಕೋಶ – ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು.
6. ಹೆಚ್ಚುವರಿ ಪ್ರತಿ/ಶಾಖಾ ರಕ್ಷಕ ಕಡತ.